( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 20/01/2020**

**ಅಸಲು ದಾವೆ.ನಂ. 281/2017**

**ಪಿ.ಡಬ್ಲ್ಯೂ 3**

( ಪಾಟೀ ಸವಾಲುಃ ಶ್ರೀ ಎಸ್.ಪಿ.ಜೆ. ವಕೀಲರು 1, 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ )

ನನಗೆ ಓದಲು ಬರೆಯಲು ಬರುವುದಿಲ್ಲ. ಸುಮಾರು 4 ವರ್ಷಗಳ ಹಿಂದೆ ವ್ಯವಹಾರ ನಡೆದಿರುತ್ತದೆ. 1 ನೇ ಪ್ರತಿವಾದಿಯ ಮನೆಯಲ್ಲಿ ವಾದಿ, 1 ರಿಂದ 3 ನೇ ಪ್ರತಿವಾದಿಯರು, ನಾನು ಮತ್ತು ನೀಲಾಚಾರಿ ವ್ಯವಹಾರದ ಬಗ್ಗೆ ಮಾತುಕತೆ ಮಾಡಿರುತ್ತೇವೆ. ಮತುಕತೆಯಾಗಿ 3 ದಿನಗಳ ನಂತರ ತಾಲ್ಲೂಕು ಕಚೇರಿಯ ಬಳಿ ಅನಂತರ ಕುಮಾರ್ ರವರು ಪತ್ರ ಬರವಣಿಗೆ ಮಾಡಿರುತ್ತಾರೆ 1 ನೇ ಪ್ರತಿವಾದಿ 100/- ರೂ. ಬೆಲೆಯ ಪತ್ರವನ್ನು ಬೆಳಗ್ಗೆ10.30 ರಿಂದ 11.00 ಗಂಟೆಯ ಸಮಯಕ್ಕೆ ತಂದಿರುತ್ತಾರೆ.

ಪತ್ರ ಬರವಣಿಗೆ ಸಮಯದಲ್ಲಿ ನಾನು, ನೀಲಾಚಾರಿ 1 ರಿಂದ 3 ನೇ ಪ್ರತಿವಾದಿಯರು ಇದ್ದೇವು. ಪತ್ರವನ್ನು 12.00 ಗಂಟೆಯವರೆಗೆ ಬರೆಯಲಾಗಿರುತ್ತದೆ. ಪತ್ರಕ್ಕೆ1 ರಿಂದ 3 ನೇ ಪ್ರತಿವಾದಿಯರು, ನಾನು, ನೀಲಾಚಾರಿ ಮತ್ತು ವಾದಿ ಸಹಿ ಮಾಡಿರುತ್ತೇವೆ. ಮೊದಲಿಗೆ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ಪತ್ರ ಬರೆಯುವರೆಗೆ ನೀಲಾಚಾರಿಯವರು ಸ್ಥಳದಲ್ಲಿ ಇದ್ದರು. ನಿಪಿ-1 ರ ಪತ್ರವು ನೋಂದಣಿಯಾಗಿರುತ್ತದೆ ನೋಂದಣಿಯಾಗುವವರೆಗೆ ನೀಲಾಚಾರಿಯವರು ಸ್ಥಳದಲ್ಲಿ ಇದ್ದರು.

ಒಟ್ಟು 2 ಲಕ್ಷ 24 ಸಾವಿರ ಕ್ರಯ ನಿಷ್ಕರ್ಷೆಯಾಗಿದ್ದು, ಆ ದಿನ 2 ಲಕ್ಷ 5 ಸಾವಿರ ರೂ. ಹಣವನ್ನು ವಾದಿ 1 ನೇ ಪ್ರತಿವಾದಿಗೆ ಸಂದಾಯ ಮಾಡಿರುತ್ತಾರೆ. ಹಣವನ್ನು ಮಧ್ಯಾಹ್ನ 12.30 ರ ಸಮಯದಲ್ಲಿ ನೀಡಿರುತ್ತಾರೆ. ನಿಪಿ-1 ರಲ್ಲಿ ಏನು ಷರತ್ತು ಬರೆದಿದೆ ಎಂದರೆ ಸಾಕ್ಷಿಯು ಸರ್ವೆ ನಂಬರ್ ತಪ್ಪಾಗಿದ್ದು, ತಿದ್ದುಪಡಿಯಾದ ನಂತರ ನೋಂದಣಿ ಮಾಡಿಸಿಕೊಡುವುದಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. 1 ಎಕರೆ 12 ಗುಂಟೆ ಪೈಕಿ 1 ಎಕರೆ ಜಮೀನು ಕ್ರಯ ಮಾಡಲು1 ರಿಂದ 3 ನೇ ಪ್ರತಿವಾದಿಯರು ಒಪ್ಪಿರುತ್ತಾರೆ. ನಮಗೂ 1 ರಿಂದ 3 ನೇ ಪ್ರತಿವಾದಿಯರ ನಡುವೆ ಸುವಾರು ವರ್ಷಗಳಿಂದ ವ್ಯಾಜ್ಯ ಇದೆ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಯರ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಇರುವ ಸಹಿಗಳು 1 ರಿಂದ 3 ನೇ ಪ್ರತಿವಾದಿಯರದ್ದಲ್ಲ ಎಂದರೆ ಸರಿಯಲ್ಲ.

ನಿಪಿ-1 ಕ್ಕೆ ನನ್ನ ಸಮಕ್ಷಮ 1 ರಿಂದ 3 ನೇ ಪ್ರತಿವಾದಿಯರ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 4 ನೇಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರ ವಕೀಲರು ಏನು ಇಲ್ಲ ಎಂದು ತಿಳಿಸಿರುತ್ತಾರೆ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

**ಓ.ಹೇ.ಕೇ.ಸ.ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**

ಸರ್ವೆ ನಂಃ 87/3 ರ ಸಂಬಂಧ 10 ವರ್ಷಗಳ ಹಿಂದೆ ವ್ಯವಹಾರ ನಡೆದಿರುತ್ತದೆ. ನಮ್ಮ ಗ್ರಾಮದ ಲಕ್ಷ್ಮಮ್ಮನವರ ಮನೆಯಲ್ಲಿ ಮತುಕತೆ ನಡೆದಿರುತ್ತದೆ. ಮತುಕತೆಯಾಗಿ 2 ದಿನಗಳ ನಂತರ ಪತ್ರ ಬರೆಯಲಾಗಿರುತ್ತದೆ. ಮಾತುಕತೆಯ ಸಮಯದಲ್ಲಿ ನಾನು, ವಾದಿ ಪ್ರತಿವಾದಿಯರು ಮತ್ತು ರಾಜೇಗೌಡ ಇದ್ದೇವು. ಪತ್ರವನ್ನು ದಿ೨4-06-2010 ರಂದು ಬೆಳಗ್ಗೆ 11.00 ರಿಂದ 12.00 ಗಂಟೆಯ ನಡುವೆ ಬರೆಯಲಾಗಿರುತ್ತದೆ. ನಿಪಿ-1 ರಲ್ಲಿ ಏನು ಷರತ್ತು ನಮೂದಾಗಿದೆ ಎಂದರೆ ಸಾಕ್ಷಿಯ ಪ್ರತಿವಾದಿಯ ತಮ್ಮ ಹೆಸರಿಗೆ ಖಾತೆ ಬದಲಾವಣೆಯಾದ ನಂತರ ಪತ್ರ ನೋಂದಣಿ ಮಾಡಿಸಿಕೊಡುವುದಾಗಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ದಾಖಲೆಗಳು ನಂಜೇಗೌಡರ ಹೆಸರಿನಲ್ಲಿ ಇತ್ತು.

ನಿಪಿ-1 ಪತ್ರವನ್ನು ಅನಂತಮಂಗಳಂ ರವರು ಉಪನೋಂದಣಾಧಿಕಾರಿಯವರ ಕಚೇರಿಯ ಬಳಿ ಬರೆದಿರುತ್ತಾರೆ. ನಾನು ಮತ್ತು ರಾಜೇಗೌಡ ಒಟ್ಟಿಗೆ ಬಂದಿರುತ್ತೇವೆ. ನಿಪಿ-1 ಕ್ಕೆ 1 ನೇ ಪ್ರತಿವಾದಿ ಮೊದಲಿಗೆ ಸಹಿ ಮಾಡಿರುತ್ತಾರೆ. ನಂತರ ನಾರಾಯಣ ಸಹಿ ಮಾಡಿರುತ್ತಾರೆ. ನಾವುಗಳೆಲ್ಲಾ ನಿಪಿ-1 ಕ್ಕೆ ಸಹಿ ಗಳನ್ನು ಉಪನೋಂದಣಾಧಿಕಾರಿಯವರ ಕಚೇರಿಯ ಬಳಿ ಮಾಡಿರುತ್ತೇವೆ.

ಪ್ರತಿಡಿವಾದಿಯಾರಿಗೆ ಆ ದಿನ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರಿಗೆ 2 ಲಕ್ಷ 5 ಸಾವಿರ ರೂ. ಹಣ ಸಂದಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ನಿಪಿ-1 ರಲ್ಲಿ ತಿಳಿಸಿದಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ. ಪ್ರತಿವಾದಿಯರು 1 ತಿಂಗಳಲ್ಲಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಳ್ಳುವುದಾಗಿ ತಿಳಿಸಿದ್ದು, ನಿಪಿ-1 ರಲ್ಲಿ ನಮೂದು ಮಾಡಿಲ್ಲ. ಪ್ರತಿವಾದಿಯರು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಳ್ಳದ ಪಕ್ಷದಲ್ಲಿ ಏನು ಮಾಡಬಹುದು ಎಂದು ನಿಪಿ-1 ರಲ್ಲಿ ನಮೂದು ಮಾಡಿಲ್ಲ.

ಸರ್ವೆ ನಂಃ 87/3 ರಲ್ಲಿ 1 ಎಕರೆ ಜಮೀನಿಗೆ ಕ್ರಯ ಕರಾರು ಆಗಿದ್ದು, ಒಟ್ಟು 1 ಎಕರೆ 12 ಗುಂಟೆ ಪ್ರತಿವಾದಿಯರಿಗೆ ಸೇರಿತ್ತು. ಉಳಿಕೆ 12 ಗುಂಟೆ ಜಮೀನು 1 ಎಕರೆ ಜಮೀನಿನ ಪೂರ್ವ ದಿಕ್ಕಿಗೆ ಬರುತ್ತದೆ. ನಿಪಿ-1 ಕ್ಕೆ 1 ರಿಂದ 3 ನೇ ಪ್ರತಿವಾದಿಯರು 2 ಕಡೆ ಸಹಿ ಮಾಡಿರುತ್ತಾರೆ. ನಿಪಿ-1 ರ ಪತ್ರ ಬರವಣಿಗೆಯಾದ

ನಂತರ ಸಹಿ ಮಾಡಿ ನಾನು ಹೊರಟು ಹೋಗಿರುತ್ತೇನೆ. ಉಳಿದವರು ಉಪನೋಂದಣಾಧಿಕಾರಿಯವರ ಕಚೇರಿಯ ಬಳಿ ಇದ್ದರು. ನಿಪಿ-1 ನೋಂದಣಿಯಾಯಿತೋ ಇಲ್ಲವೋ ಗೊತ್ತಿಲ್ಲ. ನಮ್ಮನ್ನು ವಾದಿ ಮತ್ತು ಪ್ರತಿವಾದಿಯರು ಕರೆದಿರುತ್ತಾರೆ.

ನನ್ನ ಮತ್ತು 1 ನೇ ಪ್ರತಿವಾದಿಯರ ನಡುವೆ ಆಸ್ತಿ ವಿಚಾರವಾಗಿ ವ್ಯಾಜ್ಯ ಇದೆ ಎಂದರೆ ಸರಿಯಲ್ಲ. ಆ ದಿನ 1000/- 100/- ಮತ್ತು 500/- ರೂ. ಮುಖ ಬೆಲೆಯ ನೋಟುಗಳಲ್ಲಿ ಹಣ ಸಂದಾಯವಾಗಿರುತ್ತದೆ. 1 ರಿಂದ 3 ನೇ ಪ್ರತಿವಾದಿಯರಿಂದ 4 ನೇ ಪ್ರತಿವಾದಿಯ ಪರವಾಗಿ ಕ್ರಯ ಪತ್ರ ವಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಆ ದಿನ ಯಾವುದೇ ಕ್ರಯದ ಕರಾರು ಪತ್ರವಾಗಿಲ್ಲ ನಾವು ಉಪನೋಂದಣಾಧಿಕಾರಿಯವರ ಕಚೇರಿಯ ಬಳಿ ಹೋಗಿಲ್ಲ, ಆ ದಿನ ನಮ್ಮ ಸಮಕ್ಷಮ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಪ್ರತಿವಾದಿಯರಿಗೂ ದ್ವೇಷವಿರುವ ಕಾರಣ ನಿಪಿ-1 ನ್ನು ವಾದಿಯೊಂದಿಗೆ ಷರೀಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಜೆ.ಎಂ.ಎಫ್.ಸಿ,ಅರಕಲಗೂಡು.**